# ಮುದ್ದೇಬಿಹಾಳ ಪ್ರದೇಶದ ಮುಸ್ಲಿಮರ ಹಬ್ಬ ಮತ್ತು ಉರುಸುಗಳು: ಒಂದು ಅವಲೋಕನ

ರಾಜೇಸಾ ಮುಜಾವರ[1] & ಎಮ್.ಎನ್. ಬೆನ್ನೂರ[2]

[1]ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17295798

## ABSTRACT:

ಮುದ್ದೇಬಿಹಾಳ ಪ್ರದೇಶದ ಮುಸ್ಲಿಮರ ಹಬ್ಬಗಳು ಮತ್ತು ಉರುಸುಗಳು ಬಿಜಾಪುರ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದಿವೆ. ಈ ಪ್ರದೇಶವು ಹಿಂದೂ ಮತ್ತು ಮುಸ್ಲಿಮರ ಭಾವೈಕ್ಯದ ನೆಲೆಯಾಗಿದೆ. ಮೊಹರಂ, ರಂಜಾನ್, ಬಕ್ರೀದ್, ಈ ಎಲ್ಲಾ ಹಬ್ಬಗಳನ್ನು ಭಾವೈಕ್ಯತೆಯಿಂದ ಆಚರಿಸುತ್ತಾರೆ. ವಿಶೇಷವಾಗಿ ಲೋಟಗೇರಿ, ಸುಲ್ತಾನಪುರ, ಮುದ್ದೇಬಿಹಾಳ, ಮುಕಿಹಾಳ, ಅಯ್ಯನಗುಡಿ ಮತ್ತು ಕಾನಿಕೇರಿ ಘಾಳಪೂಜಿ ಗ್ರಾಮಗಳ ಜನರು ಮೊಹರಂ ಹಬ್ಬವನ್ನು ಸಮಭಾವದಿಂದ ಆಚರಿಸುತ್ತಾರೆ. ಆ ಎಲ್ಲ ಗ್ರಾಮಗಳ ಜನರು, ನಾಡಗೌಡರು ಮತ್ತು ದೇಶಮುಖ ಮನೆತನದವರು ಈ ಹಬ್ಬದಲ್ಲಿ ಭಾಗವಹಿಸಿ ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತಾರೆ.

## KEYWORDS:

ಭಾವೈಕ್ಯದ, ಷಟ್ಬಾಲ್, ಜಿಲ್‌ಹಜ್, ಸದ್ಕಾ, ಈದ್, ಕುರ್ಬಾನಿ, ಹಜರತ್.

### ಪ್ರಸ್ತಾವನೆ

ವಿಶ್ವಗುರು ಬಸವಣ್ಣನವರ ಪುಣ್ಯಭೂಮಿ, ಶರಣರ ನಾಡು, ಸೂಫಿ ಸಂತರು ಬೀಡು, ಪಂಚ ನದಿಗಳ ನಾಡು, ಕನ್ನಡವನ್ನು ಪಸರಿಸುತ್ತಿರುವ ಗಡಿಭಾಗದ ಜಿಲ್ಲೆ, ಚಾಲುಕ್ಯರ ಬೀಡು, ಆದಿಲ್ ಶಾಹಿಗಳ ನಾಡು, ದ್ರಾಕ್ಷಿ, ದಾಳಿಂಬೆಗಳನ್ನು ಬೆಳೆಯುವ ತವರೂರು, 'ಪರವೇ ರಾಮಾಯಣ'ದ ಕುಮಾರ ವಾಲ್ಮೀಕಿ, ಕೊಂಡಗೋಳಿ ಕೇಶಿರಾಜ, 'ಮಲ್ಲಿನಾಥ ಪುರಾಣ'ದ ಕರ್ತೃ ನಾಗಚಂದ್ರ, ಗಣಿತ ತಜ್ಞ ನೀಡಿದ ಭಾಸ್ಕರಾಚಾರ್ಯ, ಬಿಳಿ ಜೋಳದ ಭೂಮಿ, ಹೀಗೆ ಹಲವಾರು ನಾಮ ವಿಶೇಷಗಳನ್ನು ಹೊಂದಿದ ಜಿಲ್ಲೆ ವಿಜಯಪುರ. ತನ್ನದೇ ಆದ ವೈಭವ, ಭವ್ಯತೆ ಹೊಂದಿ ಕರ್ನಾಟಕವನ್ನು ಆಳಿದ ಬಹುತೇಕ ರಾಜಮನೆತನಗಳ ಆಳ್ವಿಕೆಗೆ ಒಳಗಾಗಿ, ಆಯಾ ಕಾಲಾವಧಿಯಲ್ಲಿ ಜಿಲ್ಲೆಯ ಸಂಸ್ಕೃತಿ ರೂಪಗೊಂಡು ಸರ್ವಧರ್ಮದ ಸಮನ್ವಯತೆಯ ನೆಲೆಯಾಗಿ ರೂಪಿಸಲ್ಪಟ್ಟಿದೆ.

### ಮುಸ್ಲಿಮರ ಹಬ್ಬ ಮತ್ತು ಉರುಸುಗಳು

ಭಾರತ ಹಲವು ಮತ ಧರ್ಮಗಳ ನೆಲೆವೀಡು. ಇಲ್ಲಿರುವಷ್ಟು ಧರ್ಮಗಳು ಜಗತ್ತಿನ ಮತ್ತಾವ ದೇಶದಲ್ಲಿಯೂ ಇಲ್ಲ. ಆದರೆ ವಿವಿಧತೆಯಲ್ಲಿ ಏಕತೆ ಇರುವುದು ಇವುಗಳ ವೈಶಿಷ್ಟ್ಯ . ಕ್ರಿ.ಶ. 7ನೆಯ ಶತಮಾನದಿಂದ ಭಾರತದಲ್ಲಿ ನೆಲೆಸಿರುವ ಮುಸ್ಲಿಮರು ಇಲ್ಲಿರುವ ಪವಿತ್ರ ಗಾಳಿ, ನೀರು, ಅನ್ನ ಸೇವಿಸಿ ಭಾರತವಾಸಿಗಳೇ ಆಗಿದ್ದಾರೆ. ತಮ್ಮ ಧರ್ಮ ತತ್ವಗಳ ಜೊತೆಗೆ ಬೇರೆ ಮತ ಧರ್ಮಗಳ ತತ್ವ ಸಾರ ಗೌರವಿಸಿ, ಸ್ವೀಕರಿಸಿ ಸೌಹಾರ್ದಯುತವಾಗಿ ಬಾಳಿದ್ದಾರೆ. ಸೂಫಿ ಸಂತರು, ಶಿವಶರಣರು, ಶಿವದಾಸರು, ಹರಿದಾಸರು ಭಾವೈಕ್ಯದ

ಬೀಜಮಂತ್ರ ಊರಿ ಭಾರತವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ರೂಪಿಸಿ ಜಗತ್ತಿನಲ್ಲಿಯೇ ಪ್ರತಿಷ್ಠೆಯಿಂದ ಮೆರೆಯುವಂತೆ ಮಾಡಿದ್ದಾರೆ.

ಇತ್ತೀಚೆಗೆ ಕೆಲವು ರಾಜಕೀಯ ವ್ಯಕ್ತಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ, ಅಧಿಕಾರದ ಲಾಲಸೆಗಾಗಿ ಕೋಮು ಭಾವನೆ ಕೆರಳಿಸಿ, ಮತೀಯ ದಳ್ಳುರಿ ಹಬ್ಬಿಸಿ ಭಾರತ ದೇಶವನ್ನು ಕೊಲೆ-ಸುಲಿಗೆ, ಅನ್ಯಾಯ, ಅತ್ಯಾಚಾರ, ಪಾಪಕೂಪಗಳ ಬೀಡಾಗಿಸುತ್ತಿರುವುದು ಕಂಡುಬರುತ್ತಿದೆ. ಇಂಥ ಸಂದಿಗ್ಧ ಸಮಯದಲ್ಲಿ, ವಿಷಮ ಪರಿಸ್ಥಿತಿಯಲ್ಲಿ ಭಾವೈಕ್ಯದ ತಾಣಗಳಾದ ಹಬ್ಬ-ಹುಣ್ಣಿಮೆ, ಜಾತ್ರೆ-ಉರುಸುಗಳನ್ನು ಅಭ್ಯಸಿಸಿ, ನಾಡಿನ ಮೂಲೆ ಮೂಲೆಗೂ ಮತೀಯ ಸಾಮರಸ್ಯದ ಅವಶ್ಯಕತೆಯನ್ನು ಒತ್ತಿ ಹೇಳಿ, ದ್ವೇಷ, ಅಸೂಯೆ, ಮಾತ್ಸರ್ಯದ ಕಳೆ ಕಿತ್ತೊಗೆದು ಹಿಂದೂ-ಮುಸ್ಲಿಂ ಭಾವೈಕ್ಯದ ಮಧುರ ಬೆಳೆ ಬೆಳೆಸಬೇಕಾಗಿದೆ. ಆ ಬೆಳೆ ಬೆಳೆಸುವ ಪ್ರಯತ್ನಗಳಲ್ಲಿ "ಮುಸ್ಲಿಮರ ಹಬ್ಬ ಮತ್ತು ಉರುಸುಗಳು" ಪ್ರಮುಖ ಪಾತ್ರ ವಹಿಸುವುದೆಂದು ನನ್ನ ಅನಿಸಿಕೆ.

**ಮುಸ್ಲಿಮರ ಹಬ್ಬಗಳು**

ಮಹಮ್ಮದ ಪೈಗಂಬರ (ಸ.ಅ.)ರು ಅಲ್ಲಾಹನ ಆಜ್ಞೆಯಂತೆ ಮಕ್ಕಾ ಬಿಟ್ಟು ಮದೀನಾಕ್ಕೆ ಹೊರಟಿದ್ದು ಕ್ರಿ.ಶ. 622ರಲ್ಲಿ. ಹಿಜರಿ ಶಕೆ ಆರಂಭಗೊಂಡಿದ್ದು ಅಂದಿನಿಂದ. ಹಿಜರಿ ಶಕೆಯ ಒಂದು ವರ್ಷದಲ್ಲಿ ಮೊಹರಂ, ಸಫರ್, ರಬೀಉಲ್ ಅವ್ವಲ್, ರಬೀಉಸ್ಸಾನಿ, ಜಮಾದಿಉಲ್ ಅವ್ವಲ್, ಜಮಾದಿ ಉಸ್ಸಾನಿ, ರಜಬ್, ಶಾಬಾನ್, ರಂಜಾನ್, ಷಟ್ವಾಲ್, ಜಿಲ್ಲಾದ, ಜಿಲ್‌ಹಜ್ ಎಂಬ 12 ತಿಂಗಳುಗಳಿದ್ದು, ಇವುಗಳಲ್ಲಿ ಕೆಲವು ವಿಶಿಷ್ಟ ದಿನಗಳೆಂದು ಭಾರತೀಯ ಮುಸ್ಲಿಮರು ಹಬ್ಬ ಆಚರಿಸುತ್ತಾರೆ ಮತ್ತು ಉರುಸು ಮಾಡುತ್ತಾರೆ. ಹಬ್ಬ ಎಂದರೆ ಉತ್ಸವ, ಸಂತೋಷದ ಸಂದರ್ಭ. ಕೆಲವೊಮ್ಮೆ ಆಯಾ ತಿಂಗಳಿನಲ್ಲಿ ನಡೆದ ಘಟನೆ ಅದು ಸಂತೋಷದ್ದಿರಲಿ, ದುಃಖದ್ದಿರಲಿ, ಅದರ ನೆನಪಿಗಾಗಿ ಅದು ನಡೆದ ದಿನದಂದು ಒಂದು ಬಗೆಯ ಆಚರಣೆಯನ್ನು ನಡೆಸಿಕೊಂಡು ಬರುವುದೂ ಹಬ್ಬ ಎನಿಸಿಕೊಳ್ಳುತ್ತದೆ. ಐಹಿಕ ಸುಖ ಸಾಧನೆಗೆ ಉತ್ತೇಜನವೀಯುವುದು ಹಬ್ಬದ ಒಂದು ಮುಖವಾದರೆ, ಮೋಕ್ಷ ಸಾಧನೆಗಾಗಿ ಹಬ್ಬಗಳನ್ನು ಆಚರಿಸುವುದು ಅಡಕ ಇನ್ನೊಂದು ಮುಖ.

**ರಂಜಾನ್ ಅರ್ಥ**

ಹಿಜರಿ ಶಕೆಯ 9ನೇ ತಿಂಗಳು ರಂಜಾನ್ ಆಗಿದೆ. 'ರಮಾಜ್' ಎಂದರೆ ಅರಬ್ಬಿ ಭಾಷೆಯಲ್ಲಿ ಸುಡುವುದು, ಕಾಲು ಸುಡುವುದು ಎಂದರ್ಥ. ಅರಬಿ ವರ್ಷದ ಒಂಬತ್ತನೇ ತಿಂಗಳು ಪೂರ್ತಿಗಳ ಗಣನೆಯ ಪ್ರಕಾರ ಬೇಸಿಗೆಯಲ್ಲಿ ಬರುತ್ತದೆ. ಆದುದರಿಂದ ಇದಕ್ಕೆ ಈ ಹೆಸರು ಬಂದಿದೆ. ಈ ತಿಂಗಳಿನಲ್ಲಿ ರೋಜಾ ಉಪವಾಸ ವ್ರತ ಆಚರಿಸುವುದರಿಂದ ಪಾಪಗಳು ಸುಟ್ಟು ಬೂದಿಯಾಗುತ್ತವೆ ಎಂಬ ಭಾವನೆಯಿಂದ ಈ ಹೆಸರು ಬಂದಿದೆ. ಇದಕ್ಕೆ ಇನ್ನೊಂದು ಹೆಸರು ಈದ್ ಉಲ್ ಫಿತರ್. ಎಂದರೆ, ಈದ್ ಎಂದರೆ ಹಬ್ಬ, ಉಲ್ ಫಿತರ್ ಎಂದರೆ ಉಪವಾಸ ಮುಗಿಸುವುದು ಅಥವಾ ಉಪವಾಸ ಮುಗಿಸುವವನು ಎಂದರ್ಥ. ಈ ಕಾರಣದಿಂದ ರಂಜಾನ್ ಹಬ್ಬವನ್ನು ಈದ್ ಉಲ್ ಫಿತರ್ ಎಂದು ಕರೆಯುವುದುಂಟು. ಈ ಹಬ್ಬದಲ್ಲಿ ಸದ್ಕಾ ನೀಡುತ್ತಾರೆ.

ಮುದ್ದೇಬಿಹಾಳ ಪ್ರದೇಶದಲ್ಲಿ ಎಲ್ಲ ಮುಸ್ಲಿಂ ಬಾಂಧವರು 30 ದಿನಗಳ ಕಾಲ ರೋಜಾ ಉಪವಾಸ ವ್ರತವನ್ನು ಆಚರಿಸುತ್ತಾರೆ. ಇಸ್ಲಾಂ ಧರ್ಮದ ಪಂಚ ಮೂಲಭೂತ ಕರ್ತವ್ಯಗಳಲ್ಲಿ ಇದು ಒಂದು. ಉಪವಾಸ ವ್ರತ ಇಸ್ಲಾಮೇತರ ಧರ್ಮಗಳಲ್ಲಿಯೂ

ರೂಢಿಯಲ್ಲಿದೆ, ಆದರೆ ಇಸ್ಲಾಮಿಗಳಲ್ಲಿ 30 ದಿನಗಳ ಕಾಲ ರೋಜಾ ಕಡ್ಡಾಯವಾಗಿದ್ದು, ಅದು ಮುಗಿದ ನಂತರ, ಅಂದರೆ 30ನೇ ದಿನ ಈದುಲ್ ಫಿತರ್ ಆದ ನಂತರ, ಮುದ್ದೇಬಿಹಾಳ ತಾಲ್ಲೂಕಿನ ಪ್ರತಿಷ್ಠಿತ ಮನೆತನ ನಾಡಗೌಡರು ಮತ್ತು ದೇಶಮುಖರ ವಾಡೆಗಳಿಗೆ ಇಸ್ಲಾಂ ಬಾಂಧವರು ಹೋಗಿ ಸಲಾಮಿ ಕೊಡುವ ಪದ್ಧತಿ ಪ್ರತಿ ವರ್ಷವೂ ಇರುತ್ತದೆ.

**ಬಕ್ರೀದ್ ಹಬ್ಬ**

ದೇಶ ವಿದೇಶಗಳಲ್ಲಿ ಸಂತೋಷ ಸಂಭ್ರಮದಿಂದ ಮುಸ್ಲಿಮರು ಆಚರಿಸುವ ಹಬ್ಬಗಳಲ್ಲಿ 'ಬಕ್ರೀದ್' ಹಬ್ಬವೂ ಒಂದು. ತ್ಯಾಗ, ಬಲಿದಾನ ಮತ್ತು ಅಲ್ಲಾಹನಲ್ಲಿ ಸಂಪೂರ್ಣ ಶರಣಾಗತಿಯ ಸಂದೇಶವನ್ನು ಸಾರುವ ಈ ಹಬ್ಬ ಭಾರತದಲ್ಲಿ ತನ್ನದೇ ಆದ ವೈಶಿಷ್ಟ್ಯ ಹೊಂದಿದೆ.

**ಬಕ್ರೀದ್ ಎಂದರೆ**

ಅರಬ್ಬಿ ಭಾಷೆಯಲ್ಲಿ 'ಬಕ' ಎಂದರೆ ಹಸು ಅಥವಾ ಎತ್ತು ಎಂದರ್ಥ. 'ಈದ್' ಎಂದರೆ (ಸಂತೋಷ, ಆನಂದ, ಹಂತಿರುಗು) ಹಬ್ಬ ಎಂದು ಅರ್ಥೈಸಬಹುದು. ಒಟ್ಟಾರೆ, ಅಲ್ಲಾಹನ ಹೆಸರಿನಲ್ಲಿ ಹಸು ಅಥವಾ ಎತ್ತನ್ನು ಬಲಿ ಕೊಡುವ ದಿವಸದ ಆಚರಣೆಯೇ ಬಕ್ರೀದ್. ರಮ್‌ಜಾನ್ ಹಬ್ಬಕ್ಕಿಂತಲೂ ದೊಡ್ಡದೆಂದು ಭಾವಿಸಲಾಗುವ ಈ ಹಬ್ಬಕ್ಕೆ 'ಈದೇ ಕಬೀರ್' ಎಂದು ಕರೆಯುತ್ತಾರೆ. ಇದಲ್ಲದೆ, ಈದುಜ್-ಜುಹಾ (ಬಲಿದಾನದ ಹಬ್ಬ), ಈದೇ ಕುರ್‌ಬಾನ್ (ಬಲಿ ನೀಡುವ ಹಬ್ಬ), ಯೌಮುನ್ನಹರ್ (ಒಂಟೆಯ ಬಲಿದಾನದ ಹಬ್ಬ), ಈದೇ ಬೈರುಮ್ (ಆನಂದೋತ್ಸವ) ಎಂಬ ಹೆಸರುಗಳಿಂದ ದೇಶ ವಿದೇಶಗಳಲ್ಲಿ ಆಚರಣೆಯಲ್ಲಿದೆ. ಬಕ್ರೀದ್ ಹಬ್ಬವನ್ನು ಜಿಲ್‌ಹಜ್ ತಿಂಗಳ ಹತ್ತನೆಯ ದಿನದಂದು ಆಚರಿಸಲಾಗುತ್ತದೆ. ಈ ಹಬ್ಬಕ್ಕೂ ಹಜ್ ಯಾತ್ರೆಗೂ ಅವಿನಾಭಾವ ಸಂಬಂಧವಿದ್ದು, ಪ್ರತಿವರ್ಷ ಲಕ್ಷಾಂತರ ಜನ ಮುಸ್ಲಿಮರು ಮಕ್ಕೆಯಲ್ಲಿರುವ ಪವಿತ್ರ 'ಕಾಬಾ'ವನ್ನು ಜಿಲ್‌ಹಜ್ ತಿಂಗಳಿನಲ್ಲಿ ಸಂದರ್ಶಿಸುತ್ತಾರೆ ಮತ್ತು 'ಮಿನಾ' ಎಂಬ ಸ್ಥಳದಲ್ಲಿ ಕುರ್ಬಾನಿ (ಬಲಿದಾನ) ನೀಡುತ್ತಾರೆ.

**ಬಲಿದಾನದ ಮಹಿಮೆ**

ಕುರಾನ್ ಷರೀಫ್ ಮತ್ತು ಹದೀಸುಗಳಲ್ಲಿ ಬಲಿದಾನದ ಮಹಿಮೆ ಕುರಿತು ಹೇಳಲಾಗಿದೆ. ಬಲಿ ಕೊಡಲಾಗುವ ಒಂಟೆಯ ವಯಸ್ಸು ಐದು ವರ್ಷ, ಎತ್ತಿನ ವಯಸ್ಸು ಎರಡು ವರ್ಷ ಮತ್ತು ಆಡಿನ ವಯಸ್ಸು ಒಂದು ವರ್ಷ ದಾಟಿರಬೇಕೆಂದು ಹೇಳಲಾಗುತ್ತದೆ. ಇವು ಆರೋಗ್ಯವಾಗಿದ್ದು, ರೋಗಪೀಡಿತವಾಗಿರಬಾರದೆಂದು ನಿಯಮವಿದೆ. ಹಾಗೆ ಮುದ್ದೇಬಿಹಾಳ ತಾಲ್ಲೂಕಿನ ಎಲ್ಲಾ ಗ್ರಾಮದಲ್ಲಿ ವಾಸವಾಗಿರುವ ಮುಸ್ಲಿಮರು ತಮ್ಮ ಯೋಗ್ಯಾನುಸಾರ ಮನೆಯಲ್ಲಿ ಕುರಿ, ಮೇಕೆ, ಎತ್ತು ಅಲ್ಲಾಹನ ಹೆಸರಿನಲ್ಲಿ ಜಬಾ ಮಾಡಿ, ಶುದ್ಧ ಮಾಂಸವನ್ನು ಸರಿಯಾಗಿ ಮೂರು ಭಾಗ ಮಾಡಿ, ಒಂದು ಭಾಗವನ್ನು ಬಡವರಿಗೆ, ಒಂದು ಭಾಗವನ್ನು ಬಂಧು-ಮಿತ್ರರಿಗೆ ಹಂಚುತ್ತಾರೆ. ಉಳಿದೊಂದು ಭಾಗವನ್ನು ತಾವು ಉಪಯೋಗಿಸಿಕೊಳ್ಳುತ್ತಾರೆ.

**ಮೊಹರಂ ಹಬ್ಬ**

ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಚಲಿತವಾಗಿರುವ ಹಿಜರಿ ಸಂವತ್ಸರದ ಮೊದಲನೇ ತಿಂಗಳು ಮೊಹರಂ. ಮೊಹರಂ ಅರಬ್ಬಿ ಭಾಷೆಯ ಶಬ್ದ. ಇದರರ್ಥ ನಿಷಿದ್ಧವಾದದ್ದು

ಅಥವಾ ವರ್ಜಿತವಾದದ್ದು. ಇಸ್ಲಾಂ ಧರ್ಮ ಸ್ಥಾಪನೆಯ ಮೊದಲು ಅರಬ್ ಸ್ಥಾನದಲ್ಲಿ ಈ ತಿಂಗಳಲ್ಲಿ ಯುದ್ಧ ಅಥವಾ ರಕ್ತಪಾತ ಧಾರ್ಮಿಕ ದೃಷ್ಟಿಯಿಂದ ನಿಷಿದ್ಧವಾಗಿತ್ತು. ಆದುದರಿಂದ ಈ ತಿಂಗಳಿಗೆ ಈ ಹೆಸರು ಬಂದಿತು. ಅನಂತರ ಮುಸ್ಲಿಮರು ಇದೇ ಹೆಸರನ್ನು ಬಳಕೆಯಲ್ಲಿ ತಂದರು. ಮೊಹರಂ ಇನ್ನೊಂದು ಹೆಸರು ಸಯ್ಯದ್ದು ಅಶಹರ್ ಎಂದರೆ ಎಲ್ಲ ತಿಂಗಳುಗಳ ದೊರೆ. ಆದರೆ ಇದೇ ತಿಂಗಳಲ್ಲಿ ಹಜರತ್ ಇಮಾಮ್ ಹುಸೇನರು ಹುತಾತ್ಮರಾದರು. ಆದುದರಿಂದ ಈ ತಿಂಗಳು ದುಃಖದಾಯಕ, ಪವಿತ್ರವೆಂದು ಪರಿಗಣಿಸಲಾಗಿದೆ. ಭಾರತಕ್ಕೆ ಮುಸ್ಲಿಮರ ಪ್ರವೇಶವಾದ ನಂತರ, ಅದರಲ್ಲೂ ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಗೆ ಮಹಮ್ಮದೀಯರ ಪ್ರವೇಶವಾದ ನಂತರ, ದೆಹಲಿಯ ಮಹತ್ವಾಕಾಂಕ್ಷೆಯ ಸುಲ್ತಾನ ಕಿಲ್ಜಿ ವಂಶದ ಜಲಾಲುದ್ದೀನ್ ಖಿಲ್ಜಿಯ ಅಳಿಯನಾದ ಅಲ್ಲಾಹುದ್ದೀನ್ ಖಿಲ್ಜಿಯು ದೆಹಲಿಯ ಸಿಂಹಾಸನವನ್ನು ಪಡೆದ ನಂತರ ದಕ್ಷಿಣ ಭಾರತದ ಭೂ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ, ದಕ್ಷಿಣ ಭಾರತಕ್ಕೆ ಮುಸ್ಲಿಮರ ಪ್ರವೇಶವಾಯಿತು. ತದನಂತರದಲ್ಲಿ ಆಚರಣೆಗೆ ಬಂದ ಹಬ್ಬವೇ ಮೊಹರಂ ಹಬ್ಬ. ಹಜರತ್ ಮೊಹಮ್ಮದ್ ಪೈಗಂಬರರು ಮಾನವ ಕಲ್ಯಾಣಕ್ಕಾಗಿ ಬಹು ಕಷ್ಟ ನಷ್ಟ ಅನುಭವಿಸಿ ಇಸ್ಲಾಂ ಪ್ರಜಾಪ್ರಭುತ್ವ ಸ್ಥಾಪನೆ ಮಾಡಿದರು. ಅವರ ಮರಣದ ನಂತರ ಅನೇಕ ಪ್ರವಾದಿಗಳು ಇಸ್ಲಾಂ ಧರ್ಮವನ್ನು ಮುನ್ನಡೆಸಿಕೊಂಡು ಬಂದರು. ಮುದ್ದೇಬಿಹಾಳ ಪ್ರದೇಶದ ಅನೇಕ ಗ್ರಾಮಗಳಲ್ಲಿ ಮುಸ್ಲಿಮರಿಲ್ಲದಿದ್ದರೂ ಕೂಡ ಮೊಹರಂ ಹಬ್ಬವನ್ನು ಆಚರಣೆ ಮಾಡುವುದು, ಮುಸ್ಲಿಮೇತರರು ಆ ಹಬ್ಬದ ಮೇಲೆ ಇಟ್ಟಿರುವ ಒಂದು ಗೌರವ ಮತ್ತು ಹಿಂದೂ ಮುಸ್ಲಿಮರ ಸಾಮರಸ್ಯದ ಪ್ರತೀಕವಾದ ಹಬ್ಬವೇ ಈ ಮೊಹರಂ ಹಬ್ಬವಾಗಿದೆ.

**ಲೋಟಗೇರಿ**

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಬರುವ ಲೋಟಗೇರಿ ಗ್ರಾಮದಲ್ಲಿ ಮುಸ್ಲಿಂ ಸಮುದಾಯಗಳಿಲ್ಲ. ಆದರೂ ಕೂಡ ವೈಭವಯುತವಾಗಿ ಮೊಹರಂ ಹಬ್ಬವನ್ನು ಆಚರಣೆ ಮಾಡುತ್ತಾರೆ. ಲೋಟಗೇರಿ ಗ್ರಾಮದ ಸಮೀಪದಲ್ಲಿರುವ ನಾಲತವಾಡ ಪಟ್ಟಣದ ಮುಸ್ಲಿಂ ಸಮುದಾಯದ ಮುಲ್ಲಾ ಮನೆತನದವರು ಆ ಗ್ರಾಮಕ್ಕೆ ಪ್ರತಿ ವರ್ಷ ಮೊಹರಂ ಹಬ್ಬವನ್ನು ಆಚರಣೆ ಮಾಡಲು ಬರುತ್ತಾರೆ. ಅವರ ಸಮ್ಮುಖದೊಳಗಡೆ ಎಲ್ಲಾ ಮೊಹರಂ ಸಂದರ್ಭದಲ್ಲಿನ ಧಾರ್ಮಿಕ ಆಚರಣೆಗಳು, ವ್ಯವಸ್ಥೆಗಳು ಬಹಳ ವೈಭವಯುತವಾಗಿ ನಡೆಯುತ್ತವೆ.

**ಸುಲ್ತಾನಪುರ**

ಮುದ್ದೇಬಿಹಾಳ ತಾಲ್ಲೂಕಿನ ಮತ್ತೊಂದು ಗ್ರಾಮವೆಂದರೆ ಸುಲ್ತಾನಪುರ. ಈ ಗ್ರಾಮದಲ್ಲಿ ಹಿಂದುಗಳು ಬಹುಸಂಖ್ಯಾತರಿದ್ದು, ಮುಸ್ಲಿಂ ಸಮುದಾಯದವರಿಲ್ಲದಿದ್ದರೂ ಈ ಹಬ್ಬವನ್ನು ಅವರು ಅತಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಮೊಹರಂ ಹಬ್ಬ ಪ್ರಾರಂಭವಾದಂದಿನಿಂದ ಕೊನೆಯ ದಿನ ವಾಲೀಕಾರ ಗದ್ಯಪ್ಪನವರ ಮನೆಯಿಂದ ಕತ್ತಿಯನ್ನು ತೆಗೆದುಕೊಂಡು ಬಂದು ಅಲೆದವರಿಗೆ ಮುಟ್ಟಿಸಿದ ನಂತರ ಹಬ್ಬ ಕೊನೆಗೊಳ್ಳುತ್ತದೆ. ಇದು ಮುದ್ದೇಬಿಹಾಳ ತಾಲ್ಲೂಕಿನ ಸಾಮರಸ್ಯದ ಪ್ರತೀಕವಾಗಿ ನಡೆಯುವ ಒಂದು ಹಬ್ಬವಾಗಿದೆ.

**ಮೊಹರಂ ಆಚರಣೆಗೆ ಪ್ರೋತ್ಸಾಹ**

ದಕ್ಷಿಣ ಭಾರತದಲ್ಲಿ ಕಲಬುರ್ಗಿ ಮತ್ತು ಬೀದರ್‌ನಿಂದ ಆಳಿದ ಬಹುಮನಿ ಸುಲ್ತಾನರು ಮತ್ತು ಬಿಜಾಪುರದ ಆದಿಲ್ ಶಾಹಿಗಳು ಕಟ್ಟುನಿಟ್ಟಾಗಿ ಮೊಹರಂ ಹಬ್ಬ

ಆಚರಿಸುತ್ತಿದ್ದರು. ಈ ಹಬ್ಬವನ್ನು ಆಚರಿಸಲು ಎಲ್ಲಾ ಮುಸ್ಲಿಂ ಶಾಹಿ ಮನೆತನದವರು ತಮ್ಮ ಬೊಕ್ಕಸದಿಂದ ಧನ ಸಹಾಯ ಮಾಡುತ್ತಿದ್ದರು. ಇದು ಸಾಮ್ರಾಟ ಅಕ್ಬರನ ಕಾಲದಲ್ಲಿ ಇಲಾಖೆ ಸ್ಥಾಪಿಸಿದ ನಂತರ ಮೊಹರಂ ಒಂದು ರಾಷ್ಟ್ರೀಯ ಹಬ್ಬವಾಗಿ ಮಾರ್ಪಾಡಾಯಿತು.

**ಮುಸ್ಲಿಮರ ಹಬ್ಬಗಳಲ್ಲಿ ಭಾವೈಕ್ಯತೆ**

ಮಾನವ ಜನಾಂಗದ ನಿತ್ಯ ಜೀವನದ ಆಗುಹೋಗುಗಳ ಮೇಲೆ ಮತ-ಧರ್ಮಗಳು ಬೀರಿರುವ ಪ್ರಭಾವ ಗಾಢವಾದದ್ದು. ಭಾರತ ದೇಶ ಇದಕ್ಕೆ ಹೊರತಾಗಿಲ್ಲ. ಈ ದೇಶದಲ್ಲಿ ಹಲವಾರು ತೆರನ ಆಸ್ತಿಕತೆ ಭದ್ರವಾಗಿ ನೆಲೆಗೊಂಡಿದೆ. ಅನೇಕ ರೀತಿಯ ಆಚರಣೆಗಳು ಪ್ರಚಲಿತವಿದ್ದು, ಹಿಂದೂ ಪಂಗಡಕ್ಕೆ ಸೇರಿದ ಜಾತಿಗಳಲ್ಲಿ ಮತೀಯ ಸಾಮರಸ್ಯವಿರುವಂತೆ, ಹಿಂದೂ-ಮುಸ್ಲಿಂ ಕೋಮು ಸೌಹಾರ್ದಗಳಿರುವ ಆಚರಣೆಗಳು ನಮಗೆ ಮುದ್ದೇಬಿಹಾಳ ಪ್ರದೇಶದಲ್ಲಿ ಕಾಣಸಿಗುತ್ತವೆ. ಯಾವುದೇ ಮತಕ್ಕಿಂತ ಇಸ್ಲಾಂ ಧರ್ಮ ಕನ್ನಡ ಜನಪದಕ್ಕೆ ಹೆಚ್ಚು ನಿಕಟವಾಗಿದೆ. ಅಷ್ಟೇ ಅಲ್ಲ, ಹಿಂದೂ-ಮುಸ್ಲಿಂ ಧರ್ಮಗಳೆರಡು ಒಂದಾಗಿ ನಡೆಸುವ ಆಚರಣೆ, ಆರಾಧನೆ, ಹಬ್ಬ, ಉತ್ಸವ, ವರುಷಗಳು ನಮ್ಮಲ್ಲಿವೆ.

**ರಂಜಾನ್, ಬಕ್ರೀದ್ ಮತ್ತು ಮೊಹರಂ ಹಬ್ಬದಲ್ಲಿ ಮುದ್ದೇಬಿಹಾಳ ಪ್ರದೇಶದಲ್ಲಿನ ಭಾವೈಕ್ಯತೆ**

ಇಸ್ಲಾಂ ಧರ್ಮದ ಮೂಲ ತತ್ವಗಳಲ್ಲಿ ಪ್ರಥಮ ರಂಜಾನ್, ನಂತರದಲ್ಲಿ ಬಕ್ರೀದ್ ಹಬ್ಬ. ರಂಜಾನ್ ತಿಂಗಳು ಮತೀಯ ಸೌಹಾರ್ದತೆಗೆ, ರಾಷ್ಟ್ರೀಯ ಭಾವೈಕ್ಯತೆಗೆ, ಆರ್ಥಿಕ ಸಮಾನತೆಗೆ ಮಾರ್ಗದರ್ಶಿ ಸೂತ್ರವಾಗಿದೆ. ತಿಂಗಳ ಪೂರ್ತಿ ರೋಜಾ ಇರುವುದರಿಂದ, ವ್ಯಕ್ತಿ ತನ್ನ ಆಸೆ ಆಕಾಂಕ್ಷೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವೇ ಎಂಬುದನ್ನು ತಿಳಿಸುತ್ತದೆ. ಈದುಲ್ ಫಿತರ್ ಮುಗಿದ ನಂತರ ಮುಸ್ಲಿಂ ಸಹೋದರರು ಹಿಂದುಗಳನ್ನು ಕರೆಯಿಸಿ, ತಮ್ಮ ಮನೆಗೆ ಸಿಹಿ ಪದಾರ್ಥವನ್ನು ಕೊಟ್ಟು ಉಪಚರಿಸುವುದು ಸಹೋದರತೆ, ಸಮಾನತೆಯನ್ನು ತೋರಿಸುವ ಹಬ್ಬವಾಗಿದೆ. ಹಾಗೆ, ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕೂಡ ಹಿಂದೂ ಮತ್ತು ಮುಸ್ಲಿಮರು ಸಮಭಾವದ ಭಾವೈಕ್ಯತೆಯೊಂದಿಗೆ ಆಹಾರವನ್ನು ಸೇವಿಸುವುದು ಮತ್ತು ಮುದ್ದೇಬಿಹಾಳ ಪ್ರದೇಶದ ಪ್ರತಿಷ್ಠಿತ ಮನೆತನಗಳಾದ ನಾಡಗೌಡರ ಮನೆತನ ಮತ್ತು ದೇಶಮುಖರ ಮನೆತನದ ಪ್ರಮುಖ ವಾಡೆಗಳಲ್ಲಿ ಎಲ್ಲಾ ಮುಸ್ಲಿಂ ಬಾಂಧವರು ಹಬ್ಬದ ದಿನದಂದು ಸಾಯಂಕಾಲ ಸೇರಿ, ಮನೆತನದ ಗಣ್ಯ ವ್ಯಕ್ತಿಗಳಿಗೆ ಶುಭ ಕೋರಿ, ಅವರು ಇವರಿಗೆ ಇಸ್ಲಾಂ ಧರ್ಮದವರಿಗೆ ಶುಭ ಕೋರುವ ಪದ್ಧತಿ, ಈ ಮುದ್ದೇಬಿಹಾಳ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದ ಪ್ರತೀತಿಯಾಗಿದೆ.

**ಉರುಸು ಮತ್ತು ಉತ್ಸವ ಹಿನ್ನೆಲೆ**

ಪುಣ್ಯತಿಥಿಯ ಆಚರಣೆ, ಸಮಾಧಿಗಳ ಆರಾಧನೆ, ದರ್ಗಾಗಳ ಜಿಯಾರತ್ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಇರಾಕ್ ಮತ್ತು ಅಫಘಾನಿಸ್ತಾನಗಳಲ್ಲಿ ಮಾತ್ರ ಇದೆಯೇ ಹೊರತು ಉಳಿದ ಮುಸ್ಲಿಂ ರಾಷ್ಟ್ರಗಳಲ್ಲಿ ಕಂಡುಬರುವುದಿಲ್ಲ. ಅರಬ್ ರಾಷ್ಟ್ರಗಳಲ್ಲಿ ಪ್ರವಾದಿಗಳ, ಸೂಫಿ ಸಂತರ, ಮಹಾಪುರುಷರ ಸಮಾಧಿಗಳಿದ್ದರೂ ಅವೆಲ್ಲವನ್ನೂ ಆರಾಧನೆಗೆ ನಿಷಿದ್ಧಗೊಳಿಸಲಾಗಿದೆ. ಆದರೆ ಭಾರತೀಯ ಮುಸ್ಲಿಮರು ಈ ಆರಾಧನಾ ಕ್ರಮವನ್ನು ಕೈಗೊಳ್ಳುವುದಕ್ಕೆ ತಮ್ಮ ನಡುವೆ ಬಾಳಿದ ಸಂತರ, ಮಹಾಪುರುಷರ ಅದ್ಭುತ ಪವಾಡ ಸದೃಶ ಬದುಕಿನ ಮೇಲಿರುವ ಗೌರವ ಮತ್ತು ನೆನಪು ಮುಖ್ಯ ಕಾರಣವಾದರೆ, ಪ್ರಾದೇಶಿಕ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವವು ಇನ್ನೊಂದು ಕಾರಣವಾಗಿದೆ. ಮುಸ್ಲಿಮರಷ್ಟೇ ಹಿಂದೂಗಳು ಸಮಾಧಿ ಸ್ಥಳಗಳಿಗೆ ಭೇಟಿ ನೀಡಿ ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ, ಹರಕೆ ಬೇಡಿಕೊಳ್ಳುತ್ತಾರೆ.

ಗೋರಿಗಳಿಗೆ, ದರ್ಗಾಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕುವುದು, ಆರಾಧನೆ ಸಲ್ಲಿಸುವುದು ನಿಷಿದ್ಧವೆಂದರೂ ಭಾರತದ ಮುಗ್ಧ ಮುಸ್ಲಿಮರು ಹರಕೆ ಹೊರುವುದು, ಚಾದರ ಹೊದಿಸುವುದು, ಹೂವು ಏರಿಸುವುದು, ಅಗರಬತ್ತಿ ಹೊತ್ತಿಸುವುದು ಮುಂತಾದ ಕ್ರಮಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ದರ್ಗಾಗಳಲ್ಲಿ ವಾಡಿಕೆಯಂತೆ ಉರುಸು ನಡೆಸುತ್ತಾರೆ.

**ಅಯ್ಯನಗುಡಿ ಉತ್ಸವ**

ಮುದ್ದೇಬಿಹಾಳ ಪ್ರದೇಶದಲ್ಲಿ ಬರುವ ದೇಶಗತ್ತಿ ಮನೆತನದ ಅಧೀನದಲ್ಲಿರುವ ನಾಲತವಾಡ ಪಟ್ಟಣದ ಸುಮಾರು ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಕೃಷ್ಣಾ ನದಿಯ ಹಿನ್ನೀರಿನ ದಡದಲ್ಲಿರುವ ಗ್ರಾಮ ಅಯ್ಯನಗುಡಿ. ಅದನ್ನು ಹಲವಾರು ನಾಮಗಳಿಂದ ಕರೆಯುವುದುಂಟು: ಗಗನಪುರ, ಗಗನಾಪುರ, ದೇಶ ಅಯ್ಯನಗುಡಿ, ಖಾನಾಪುರ ಹೀಗೆ ಹಲವು ಹೆಸರುಗಳಿಂದ ಆ ಗ್ರಾಮಕ್ಕೆ ಕರೆಯುತ್ತಿದ್ದರು. ಅಲ್ಲಿ ಸರ್ವಧರ್ಮ ಸಮನ್ವಯತೆಯ ಸಂಕೇತವಾಗಿ ಶ್ರೀ ಗುರು ಗಂಗಾಧರೇಶ್ವರ ಮತ್ತು ಬಡೇ ಮಿಯಾ ಅರ ದರ್ಗಾಗಳು ಒಂದೇ ವಾಸ್ತು ಶೈಲಿಯ ಒಳಗಡೆ ನಿರ್ಮಿಸಿದ್ದಾರೆ. ಈ ಇಬ್ಬರು ಸೂಫಿ ಸಂತರ ಪ್ರತಿಷ್ಠೆಯನ್ನು ನಾಡಗೌಡ ಮನೆತನದವರು ಮತ್ತು ದೇಶಗತ್ತಿ ಮನೆತನದ ದೇಶಮುಖರವರು ನಡೆಸಿಕೊಂಡು ಬರುವ ಪ್ರತೀತಿ ಇದೆ. ಅದಕ್ಕೆ ತೇರು ಎಳೆಯುವ ಪ್ರದೇಶವನ್ನು ದೇಶಮುಖ ಮನೆತನದವರು ದಾನವಾಗಿ ನೀಡಿರುತ್ತಾರೆ. ಜಾತ್ರೆಯ ಮತ್ತು ದೇವಾಲಯ, ದರ್ಗಾಗಳ ಕಟ್ಟಡಗಳ ಜವಾಬ್ದಾರಿಗಳನ್ನು ನಾಡಗೌಡ ಮನೆತನದವರು ನೋಡಿಕೊಳ್ಳುತ್ತಾರೆ. ಪ್ರತಿ ವರ್ಷ ಫೆಬ್ರವರಿ ಮಾಹೆಯ ಕೊನೆಯ ವಾರದಲ್ಲಿ ನವರಾತ್ರಿಯ ಅಮಾವಾಸ್ಯೆಯ ದಶಮಿಯ ದಿನದಂದು ಗಂಗಾಧರೇಶ್ವರನ ಹೆಸರಿನಲ್ಲಿ, ಕಲೆ, ವಾಸ್ತುಶಿಲ್ಪಗಳ ಆಗರವಾಗಿರುವ ಕಟ್ಟಿಗೆಯಲ್ಲಿ ನಿರ್ಮಿಸಿರುವ ಸುಮಾರು 60 ಅಡಿ ಎತ್ತರಕ್ಕೆ ಇರುವ ತೇರನ್ನು ಸುಮಾರು ಮೂರು ನೂರು ಮೀಟರ್ ಉದ್ದ ಎಳೆದುಕೊಂಡು ಹೋಗಿ ಬರುವ ಪ್ರತೀತಿ ಅಲ್ಲಿ ಇರುತ್ತದೆ.

**ಉಪಸಂಹಾರ**

ಒಂದು ಜನಾಂಗದ ಶೀಲ, ಸ್ವಭಾವದ ಆಸಕ್ತಿ, ಅಭಿರುಚಿಗಳು ಆ ಜನಾಂಗದಲ್ಲಿ ಮೊದಲಿನಿಂದ ಮುಂದುವರೆದುಕೊಂಡು ಬಂದ ಕಲೆಗಳಲ್ಲಿ ಅಭಿವ್ಯಕ್ತವಾಗುತ್ತವೆ. ಗ್ರಾಮೀಣರ ಬದುಕಿನೊಂದಿಗೆ ಬೆಳೆದುಕೊಂಡು ಬಂದಿರುವ ಅವರ ನೋವು–ನಲಿವು, ಆಗುಹೋಗುಗಳ ಅನುಭವ, ಆದರ್ಶಗಳ ಪ್ರದರ್ಶನವನ್ನು ನಾವು ಒಂದು ದೃಷ್ಟಿಯಿಂದ ಜನಪದ ಕಲೆ ಎಂದು ಕರೆಯಬಹುದು. ಜನಪದ ಕಲೆಗಳ ಉಗಮಸ್ಥಾನ ಗ್ರಾಮೀಣರ ಬದುಕಿನ ಅಂಗಳವಾಗಿದೆ. ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯ ಮುಸ್ಲಿಂ ಪ್ರದೇಶಗಳ ಹಬ್ಬಗಳು ಮತ್ತು ಉರುಸುಗಳು ಬಹುಮುಖ್ಯವಾಗಿ ಆ ಭಾಗದ ಜನತೆಯ ಸಾಮರಸ್ಯವನ್ನು ಬಿಂಬಿಸುತ್ತದೆ. ಅಲ್ಲದೆ ಕರ್ನಾಟಕಕ್ಕೆ ತಮ್ಮದೇ ಆದ ಸಿಂಹ ಪಾಲನ್ನು ನೀಡಿವೆ.

**ಪರಾಮರ್ಶನ ಗ್ರಂಥಗಳು:**


1. ದಸ್ತಗಿರ್ ಅಲ್ಲಿಭಾಯಿ ಆ., (1996), ಕರ್ನಾಟಕದ ಮೊಹರಂ ಪದಗಳು ಮತ್ತು ಮೊಹರಂ ಹಬ್ಬದ ಒಂದು ಅಧ್ಯಯನ.
2. ತರಿಕೆರಿ ಖ., (2009), ಕರ್ನಾಟಕದ ಮೊಹರಂ. ಪ್ರಸಾರಂಗ, ಕ.ವಿ.ವಿ. ಧಾರವಾಡ.
3. ಖಾನ್ ಎಂ.ಎಂ., (1997), ಕಿತಾಬ್ ಎ ನವರಸ್. ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
4. ತೋಂಡಿಹಾಳ. ಎಂ., (2009), ಶ್ರೀ ಗಂಗಾಧರೇಶ್ವರರ ಮಹೀಮೆ. ಮಾತೃಶ್ರೀ ಶಕುಂತಲಾ ಪ್ರಕಾಶನ, ಕಾರಕೂರು.
5. ಅಲ್ಲಿಭಾಯಿ ಆ., (1977), ಮುಸ್ಲಿಂರ ಹಬ್ಬ ಮತ್ತು ಉರುಸುಗಳು. ಪ್ರಸಾರಂಗ, ಕ.ವಿ.ವಿ. ಧಾರವಾಡ.
6. ಹಿರಣ್ಣಯ್ಯ ., (1977), ಮುಸ್ಲಿಂರ ಉತ್ಸವ ಮತ್ತು ಸಂಸ್ಕಾರಗಳು. ಮೈಸೂರು ವಿಶ್ವವಿದ್ಯಾಲಯ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.